ಶ್ರೀ ಆರ್.ವಿ. ದೇಶಪಾಂಡೆ:– ಇದರಲ್ಲಿ ಸರ್ಕಾರದ ಜವಾಬ್ದಾರಿಯೂ ಇದೆ. ನಾವು ನಿಮಗೆ ಬಿಲ್ಲು ಪಾಸು ಮಾಡಿಕೊಟ್ಟಿದ್ದೇವೆ. ಆ ವೇಳೆಯಲ್ಲಿ ಅಡ್ಮಿಷನ್ ಮುಗಿದುಹೋಗಿತ್ತು. ಯಾವ ಸಮಯದಲ್ಲಿ ಅಡ್ಮಿಷನ್ ಇತ್ತು ಆಗ ಈ ಕಾನೂನು ಇರಲಿಲ್ಲ. ಈಗ ನೀವು ನಿರ್ಣಯ ಮಾಡಿದ್ದೀರಿ ಸಂತೋಷ. ಇನ್ನು ಮುಂದೆ ಇದು ಆಗಬಾರದು. ನೀವು ಸ್ಟಿಕ್ಟ್ ಆಗಿ ಇದನ್ನು ಎನ್‌ಫೋರ್ಸ್ ಮಾಡಬೇಕು. ಡಿಸಿಪ್ಲೀನ್ ನಿಮ್ಮ ಶಿಕ್ಷಣ ರಂಗದಲ್ಲಿ ಎಲ್ಲಾ ಹೋಗಿಬಿಟ್ಟಿದೆ. ನಿಮ್ಮ ಶಿಕ್ಷಣ ರಂಗದಲ್ಲಿ ಇವೊತ್ತು ಡಿಸಿಪ್ಲೀನ್ ಉಳಿದಿಲ್ಲ. ಶಿಕ್ಷಣ ಇಂಪ್ರೂವ್ ಆಗಬೇಕಾದರೆ ನೀವು ಬಹಳ ಸ್ಟಿಕ್ಟ್ ಆಗಿ ಕಾನೂನನ್ನು ಮಾಡಬೇಕು. ಕೇವಲ ಕಾನೂನು ಮಾಡುವುದು ಅಷ್ಟೇ ಅಲ್ಲ, ಅದನ್ನು ಇಂಪ್ಲಿಮೆಂಟ್ ಮಾಡಬೇಕು. ಸೋ ಮೋಟೋ ಆ್ಯಕ್ಷನ್ ತೆಗೆದುಕೊಳ್ಳಿ. ಪ್ರೈವೇಟ್‌ನವರು ಎಲ್ಲಿ ಅಕ್ರಮವಾಗಿ ಶುರು ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

ಡಾ: ಹೆಚ್.ಡಿ. ಲಮಾಣಿ:– ಮುಂದಿನ ವರ್ಷ ಇಂಥ ಪ್ರಸಂಗ ಈ ಅಸೆಂಬ್ಲಿಯಲ್ಲಿ ಮಾತ್ರವೇ ಅಲ್ಲ ಬೇರೆ ಎಲ್ಲೂ ಚರ್ಚೆಗೆ ಬರಲು ಸಾಧ್ಯ ಇಲ್ಲ. ಮುಂದಿನ ವರ್ಷ ಸೂಕ್ತ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈಗಾಗಲೇ ನಾವು ಅಧಿಕಾರಿಗಳಿಗೆ ಸೂಕ್ತವಾಗಿ ನಿರ್ದೇಶನ ಕೊಟ್ಟು ಮುಂದಿನ ವರ್ಷದಿಂದ ಯಾವುದೇ ಹೈಸ್ಕೂಲ್ ಇರಲಿ, ಶಾಲೆ ಇರಲಿ ಮಾನ್ಯತೆ ಕೊಡುವ ಹಾಗಿದ್ದರೆ ಮಾನ್ಯತೆ ಕೊಡಬೇಕು. ಇಲ್ಲದಿದ್ದರೆ ಯಾವುದೇ ಮರ್ಸಿ ಇಲ್ಲದೆ ಅವುಗಳನ್ನು ಬಂದ್ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:– ನಾಲ್ಕು ಜನರನ್ನು ಜೈಲಿಗೆ ಕಳುಹಿಸಿ. ಆಗ ಎಲ್ಲಾ ಸರಿ ಹೋಗುತ್ತದೆ.

ಡಾ: ಹೆಚ್.ಡಿ. ಲಮಾಣಿ:– ಅದು ಒಮ್ಮೆಲೇ ಮಾಡುವುದು ಅಲ್ಲ. ಮಾಡುತ್ತೇವೆ.

ನಿಯಮ 68

ರಾಜ್ಯದ ರೈತರ ಸಾಲ ಮತ್ತು ಬಡ್ಡಿ ಮನ್ನ

† ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಹೋದರೆ ಇದರಲ್ಲಿ ಏನು ಚರ್ಚೆ ಮಾಡುವುದು ? ತಾವು ಇರಬೇಕು ಎಂದು ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ನಿನ್ನೆ ತಾವು ಇರಲಿಲ್ಲ ಎಂದು ಹೇಳಿ ಸ್ವಲ್ಪ ಮುಂದೆ ಹಾಕಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಇಲ್ಲಿಯೇ ಇರುತ್ತೇನೆ. ಈ ಸಬ್ಜೆಕ್ಟ್ ವಿಚಾರದಲ್ಲಿ ನಾನೊಂದು ಸಣ್ಣ ಮೀಟಿಂಗ್‌ನ್ನು ಕರೆದಿದ್ದೇನೆ.

ಶ್ರೀ ಬೈರೇಗೌಡ:– ಮಾನ್ಯ ಮುಖ್ಯಮಂತ್ರಿಗಳೇನಾದರೂ ಆಶ್ವಾಸನೆ ಕೊಡುವುದಾದರೆ ನಮಗೆ ಈ ಚರ್ಚೆಯೇ ಬೇಕಾಗಿಲ್ಲ. ನೇರವಾಗಿ ಹೇಳಿಬಿಡಿ. ನಮಗೆ ಏನು ಇದರ ಬಗ್ಗೆ ಮಾತನಾಡಿ ಇದರಿಂದ ಪ್ರಚಾರ ತೆಗೆದುಕೊಳ್ಳಬೇಕು ಎಂದಾಗಲಿ ಅಥವಾ ನಮಗೆ ಕ್ರೆಡಿಟ್ ತೆಗೆದುಕೊಳ್ಳಬೇಕೆಂದಾಗಲಿ ಆಸೆ ಇಲ್ಲ. ಇರತಕ್ಕಂಥ ಪರಿಸ್ಥಿತಿ ವಾಸ್ತವಾಂಶ ಗೊತ್ತಿದೆ. ದಯವಿಟ್ಟು ಏನಾದರೂ ಹೇಳುವುದು ಇದ್ದರೆ ಹೇಳಿಬಿಟ್ಟರೆ ಸದನದ ಸಮಯ ಉಳಿಯುತ್ತದೆ. ಆ ರೀತಿ ಏನಾದರೂ ಹೇಳಿಕೆ ಮಾಡುವ ಹಾಗೆ ಇದ್ದರೆ ಮಾಡಿ.

ಶ್ರೀ ಆರ್.ವಿ. ದೇಶಪಾಂಡೆ:– ನಿರ್ಣಯ ತೆಗೆದುಕೊಂಡಿದ್ದೇವೆ ಎಂದು ಹೇಳಿದರೆ ಸಂತೋಷ. ನಿಮಗೆ ನಿರ್ಣಯ ತೆಗದುಕೊಳ್ಳುವುದಕ್ಕೆ ಟೈಮ್ ಬೇಕಾದರೆ ನಾನು ಮಾತನಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ರೈತರು ನಿಮಗೆ ಚಿರಋಣಿಗಳಾಗಿರುತ್ತಾರೆ. ಅವರಿಗೆ ಹೊಸತನ ಕೊಟ್ಟಂತೆ ಆಗುತ್ತದೆ. ಹೇಳಿ ನೀವು. ಚರ್ಚೆ ಮಾಡಬೇಕು ಎಂದು ನಮಗೇನೂ ಆಸೆ ಇಲ್ಲ.

ಶ್ರೀ ಸಿ. ಬೈರೇಗೌಡ:– ನಿನ್ನೆ ಕೆಲವು ಒಳ್ಳೆಯ ಪಾಯಿಂಟ್ಸ್‌ಗಳನ್ನು ತಾವು ಹೇಳಿದ್ದೀರಿ. ಅವೆಲ್ಲಕ್ಕಿಂತ ಇದು ಶಿಖರ ಇಟ್ಟಂತೆ ಆಗುತ್ತದೆ. ತಾವು ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕೆ ಹೊರಟಿದ್ದೀರಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ನಿನ್ನೆ ತಾವು ಉತ್ತರ ಕೊಟ್ಟಿರುವುದು ನೋಡಿದಾಗ ಬಹಳ ಆದರ್ಶವಾಗಿ ಪ್ರಗತಿ ದಿಕ್ಕಿಗೆ ಹೋಗತಕ್ಕಂಥ ಸೂಚನೆಗಳು ಇವೆ. ನಮ್ಮದೇನು ಅಭ್ಯಂತರವಿಲ್ಲ. ರೈತರಿಗೆ ಇವತ್ತು ತಾವು ಬಳುವಳಿ ಕೊಡುವುದಾದರೆ ನಿಜವಾಗಿ ಸಂತೋಷವಾಗಿ ಸ್ವಾಗತ ಮಾಡುತ್ತೇವೆ. ಮೊದಲಿನಿಂದ ನಾವು ಹೇಳುತ್ತಿರುವುದು ಅದೇ. ಈಗ ನಾವು ಕೂಗಿ ನಾವು ಹೇಳಿ ನಾವು ಮಾತನಾಡಿ ನೀವು ಏನೂ ಮಾಡಬೇಕಾಗಿಲ್ಲ. ಸಂತೋಷವಾಗಿ 200 ಕೋಟಿ ರೂಪಾಯಿ ರೈತರ ಸಾಲ ಮನ್ನಾ ಮಾಡುವುದಕ್ಕೆ ಹೊರಟಿದ್ದೇವೆ ಎಂದು ಹೇಳಿ. ನಮಗೆ ಬಹಳ ಖುಷಿಯಾಗುತ್ತದೆ. ಬಡ್ಡಿ, ಸುಸ್ತಿ, ಬಡ್ಡಿ ಎಲ್ಲವನ್ನು ತೆಗೆದಿದ್ದೇವೆ ಎಂದು ಹೇಳಿ. ನಮಗೆ ಬಹಳ ಖುಷಿಯಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ:– ಇದು ಬಹಳ ಗಂಭೀರವಾದ ವಿಚಾರ ಇದೆ. ಮತ್ತು ಮಹತ್ವದ ವಿಚಾರ ಇದೆ. ಎಲ್ಲಾ ರಾಜಕೀಯ ಪಕ್ಷಗಳು ಇವತ್ತು ವಿರೋಧ ಪಕ್ಷಗಳು ಅಂದರೆ, ನಾವಾಗಲಿ, ಎಸ್.ಜೆ.ಪಿ.ಯವರಾಗಲಿ, ಬಿಜೆಪಿಯವರಾಗಿ, ವಾಟಾಳ್ ಆಗಲೀ ಎಲ್ಲರೂ ನಾವು.ಮೊದಲನೇ ಬಾರಿ ಸದನದಲ್ಲಿ ಕೂಡಿ ಒಂದು ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡಿದ್ದೇವೆ. ನಮ್ಮ ನಮ್ಮಲ್ಲಿ ರಾಜಕೀಯ ಭಿನ್ನಾಭಿಪ್ರಾಯ ಸಾಕಷ್ಟು ಇರಬಹುದು. ಆದರೆ ಮೊದಲನೇ ಬಾರಿ ಸದನದ ಇತಿಹಾಸದಲ್ಲಿ ಇವತ್ತು ಈ ಅಧಿವೇಶನದಲ್ಲಿ ನಾವು ರೈತರ ವಿಚಾರ ಬಂದಾಗ ಇಲ್ಲಿ ಪಕ್ಷ ಇಲ್ಲ. ಹಾಗಾಗಿ ಇಲ್ಲಿ ನಾವು ರಾಜಕೀಯ ಮಾಡುವುದಕ್ಕೆ ಹೊರಟಿಲ್ಲ. ಮತ್ತು ತಮಗೂ ನಾನು ಬಹಳ ಕೃತಜ್ಞತೆ ಸಲ್ಲಿಸುತ್ತೇನೆ. ಏಕೆಂದರೆ ತಾವು ಚರ್ಚೆ ಮಾಡುವುದಕ್ಕೋಸ್ಕರ ಅವಕಾಶ ಮಾಡಿಕೊಟ್ಟಿದ್ದೀರಿ. ಇಲ್ಲಿ ರಾಜಕೀಯ ಮಾಡಬೇಕು ಎನ್ನುವ ಆ ರೀತಿಯ ಕುತಂತ್ರ ಇಲ್ಲ ಅಥವಾ ಸರ್ಕಾರವನ್ನು ಕಷ್ಟದಲ್ಲಿ ಸಿಕ್ಕಿಸಬೇಕು, ಎಂದು ಆ ವಿಚಾರ ಕೂಡ ಇಲ್ಲ. ಎಷ್ಟೋ ಜನ ಕಾಂಗ್ರೆಸ್ ಶಾಸಕರು ನನ್ನನ್ನು ಭೇಟಿಯಾಗಿ ಹೇಳಿದರು, ಇದು ಬಹಳ ಒಳ್ಳೆಯ ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡಿದ್ದೀರಿ, ಇದು ರೈತರಿಗೆ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಆಗಬೇಕು, ಇದು ಒಳ್ಳೆಯ ಕೆಲಸ ಇದೆ. ರೈತ ಬಹಳ ಕಷ್ಟದಲ್ಲಿದ್ದಾನೆ, ಇದು ಆಗಬೇಕು ಎಂದು ಹೇಳಿದ್ದಾರೆ. ಮುಖ್ಯಮಂತ್ರಿಗಳು ಇವತ್ತು ರೆಡಿ ಇದ್ದರೆ ಉತ್ತರ ಕೊಡುತ್ತೇವೆ ಎಂದು ಹೇಳಿದರೆ ಕೊಡಲಿ. ವಿಚಾರಗಳನ್ನು ಹೇಳಬೇಕು, ಎನ್‌ಲೈಟನ್ ಮಾಡಬೇಕು ಎಂದು ಹೇಳಿದರೆ ನಾನು ಎನ್‌ಲೈಟ್ ಮಾಡುತ್ತೇನೆ. ಇವತ್ತು .....

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೇ, ಈ ವಿಚಾರ ಪ್ರಮುಖವಾದಂಥ ವಿಚಾರ, ರೈತರಿಗೆ ಸಂಬಂಧಪಟ್ಟ ವಿಚಾರ. ಈಗ ತಾವು ಬಹಳ ನನ್ನನ್ನು ಪ್ರೋಬ್ ಮಾಡಿ ಏನಾದರೂ ಹೇಳಿಸಿಬಿಡಬೇಕು ಎಂದು ಹೇಳಿ ಅಂದಾಜು ಇದೆ. ಈ ಎಲ್ಲಾ ಅಂದಾಜು ನೋಡಿದರೆ ನಾನು ಅಲ್ಲಿ ಕೌನ್ಸಿಲ್‌ನಲ್ಲಿ ಹೇಳಿದೆ. ಈ ಎಲ್ಲಾ ಅಂದಾಜು ನೋಡಿದರೆ ಒಂದು ದಿವಸ ನಾನು ಸನ್ಯಾಸಿಯಾಗಿ ಜೋಳಿಗೆ ಹಾಕಿಕೊಂಡು ತಿರುಪತಿಗೆ ಹೋಗತಕ್ಕಂಥದ್ದು ಇದೆ.

ಶ್ರೀ ಬಿ.ಹೆಚ್. ಬನ್ನಿಕೋಡ್:– ರೈತರಿಗೆ ಒಳ್ಳೆಯದನ್ನು ಮಾಡಿದರೆ ರಾಜಕುಮಾರ ಆಗುತ್ತಾರೆ. ಸನ್ಯಾಸಿಯಾಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:– ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವುದು ಇದ್ದರೆ, ಏಕೆಂದರೆ ಇದು ಬಹಳ ಗಂಭೀರವಾದ ವಿಚಾರ. ಇದರ ಪರಿಶೀಲನೆಗೆ ನಾವು ಸ್ವಲ್ಪ ವಿಚಾರ ಮಾಡಬೇಕಾಗಿದೆ. ಇವತ್ತೇ ಉತ್ತರ ಕೊಡತಕ್ಕಂಥ ಪರಿಸ್ಥಿತಿಯಲ್ಲಿ ನಾವಿಲ್ಲ. ಏಕೆಂದರೆ ಸ್ವಲ್ಪ

ಸಮಾಲೋಚನೆ ಮಾಡುತ್ತಿದ್ದೇವೆ. ತಾವು ಒಪ್ಪುವುದು ಇದ್ದರೆ ಇದನ್ನು ಮಂಗಳವಾರ ಅಥವಾ ಬುಧವಾರ ಚರ್ಚೆಗೆ ಇಟ್ಟರೆ ಒಳ್ಳೆಯದು....

ಶ್ರೀ ಬಿ.ಎಸ್. ಯಡಿಯೂರಪ್ಪ:– ಖಂಡಿತಾ, ನಾವು ದೇಶಪಾಂಡೆಯವರು ಚರ್ಚೆ ಮಾಡಿ ಹೇಳಿದ್ದೇವೆ, ರೈತನ ಪರವಾಗಿ ನಾವು ಈಗ ಬಗ್ಗಿಬಿಟ್ಟಿದ್ದೇವೆ. ನಾವು ಈ ಸದನದಲ್ಲಿ ಒಟ್ಟಾರೆ ಅವತ್ತಿನಿಂದ ಇವತ್ತಿನ ತನಕ ಚರ್ಚೆಯಾಗುತ್ತಿರತಕ್ಕಂಥದ್ದು ಕಂಪ್ಲೀಟ್ ರೈತನ ಸಾಲವನ್ನು ಮನ್ನಾ ಮಾಡಿ ಅವನನ್ನು ಉಳಿಸಬೇಕು ಎನ್ನುವುದು ಆದರೆ ಹಣಕಾಸಿನ ಪರಿಸ್ಥಿತಿ ಸರಿ ಇಲ್ಲದೇ ಇರುವಂಥ ಈ ಸಂದರ್ಭದಲ್ಲಿ ಬರಗಾಲಕ್ಕೆ, ಅತಿವೃಷ್ಟಿಗೆ ನೆರೆಹಾವಳಿಗೆ ಸಿಕ್ಕಿರತಕ್ಕಂಥ ಸಂದರ್ಭದಲ್ಲಿ ರೈತ ಉಳಿಯಬೇಕು. ಕೋ–ಆಪರೇಟಿವ್ ಇನ್ಸ್ಟಿಟ್ಯೂಷನ್ಸ್ ಉಳಿಯಬೇಕು ಎನ್ನುವ ದೃಷ್ಟಿಯಿಂದ ಅವನ ಸಂಪೂರ್ಣ ಎಲ್ಲಾ ಸಾಲಗಳ ಮೇಲೆ ಬಡ್ಡಿ, ಸುಸ್ತಿಬಡ್ಡಿ ಮನ್ನಾ ಮಾಡಿ. ಹೊಸದಾಗಿ ಸಾಲ ತೆಗೆದುಕೊಳ್ಳುವಂಥ ಒಂದು ಶಕ್ತಿ ಬಂದರೆ ಒಳ್ಳೆಯದಾಗುತ್ತದೆ. ಸನ್ಮಾನ್ಯ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ 83ರಲ್ಲಿ ಇಡೀ ರಾಜ್ಯದ ರೈತನಿಗೆ ಒಂದು ಅನುಕೂಲ ಮಾಡಿಕೊಟ್ಟಿದ್ದರು. ಆ ರೀತಿ ನೀವು ತೀರ್ಮಾನ ತೆಗೆದುಕೊಳ್ಳುವುದಾದರೆ ಖಂಡಿತ ರೈತನ ಉಳಿವಿಗೆ ಒಂದು ಒಳ್ಳೆಯದಾಗುತ್ತದೆ. ಅದಕ್ಕಾಗಿ ನಾವೆಲ್ಲ ಸೇರಿ ಒಕ್ಕೊರಲಿನಿಂದ ಆ ಕಡೆ ಇರುವವರ ಜೊತೆ ಚರ್ಚೆ ಮಾಡಿ ನಾವು 68ರ ಅಡಿಯಲ್ಲಿ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೇವೆ. ಅದಕ್ಕೋಸ್ಕರ ನಾಳೆ ಇಲ್ಲ ನಾಡಿದ್ದು ನಿಮ್ಮ ಸಿ.ಎಲ್.ಪಿ. ಮೀಟಿಂಗ್ ಕರೆದು ಚರ್ಚೆ ಮಾಡಿ ನೀವು ಒಂದು ಹೇಳಿಕೆ ಕೊಡುವುದಾದರೆ ಖಂಡಿತವಾಗಿ ನಾವು ಸ್ವಾಗತ ಮಾಡುತ್ತೇವೆ. ಇದು ಇತಿಹಾಸದಲ್ಲಿ ಉಳಿದುಕೊಳ್ಳಲಿ.

ನಮ್ಮೆಲ್ಲರ ಲೀಡರ್‌ಗಳ ಒಂದು ಮೀಟಿಂಗ್ ಕರೆಯಿರಿ; ಚರ್ಚೆ ಆಗಲಿ. ಈ ಸದನದಲ್ಲಿ ಒಂದು ಮೀಟಿಂಗ್ ಕರೆಯಿರಿ; ಆ ಕಡೆ ಈ ಕಡೆಯವರು ಕುಳಿತುಕೊಂಡು ಚರ್ಚೆ ಮಾಡಿ, ನಿಮಗೆ ಮನದಟ್ಟಾದರೆ ಬಂದು ಇಲ್ಲಿ ಅನೌನ್ಸ್ ಮಾಡಿ. ಅಲ್ಲಿಯವರೆಗೆ ನೀವು ಇಷ್ಟೇ ಮಾಡಿ. ಈ ನೋಟೀಸ್ ಕೊಡುತ್ತಿರುವುದರಿಂದ 9 ಪರ್ಸೆಂಟ್ ಬಡ್ಡಿ ಆತನಿಗೆ ಬೀಳುತ್ತಿದೆ. ಅದನ್ನು ನಿಲ್ಲಿಸುವಂತಹ ಪ್ರಯತ್ನ ಮಾಡಿ. ಉಳಿಸುವುದಕ್ಕಾದರೆ ಅದನ್ನು ಬೇಕಾದರೂ ಮಾಡಿ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಮುಖ್ಯಮಂತ್ರಿಗಳೇ, ತಮಗೆ ಒಂದು ಸಲಹೆ ಮಾಡುತ್ತಿದ್ದೇವೆ. ಇವತ್ತೇ ಎಲ್ಲಾ ವಿರೋಧಪಕ್ಷದ ಮುಖಂಡರುಗಳ ಸಭೆ ಕರೆಯಿರಿ. ಇವತ್ತೇ ಕರೆಯಿರಿ. ಕರೆದು ನಮ್ಮ ಸಲಹೆಗಳನ್ನೆಲ್ಲಾ ತೆಗೆದುಕೊಳ್ಳಿ. ಯಾವ ಟೈಮ್‌ನಲ್ಲಿ ಯಾವಾಗಲಾದರೂ ಕರೆದರೂ ಬರುವುದಕ್ಕೆ ಸಿದ್ಧ ಇದ್ದೇವೆ, ಇದನ್ನು ಮಾಡಿ. ಆ ನಂತರ ತಾವು ಮಂಗಳವಾರ ಸೋಮವಾರ ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದು.

ಪ್ರೊ: ನಂಜುಂಡಸ್ವಾಮಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಿಗೆ ನೆನಪು ಇದೆ. ಪ್ರವಾಹ ಬಂದ ಒಂದು ದಿವಸಕ್ಕೂ ಎರಡು ದಿವಸಕ್ಕೂ ತಾವು ಪ್ರಮಾಣ ವಚನ ಸ್ವೀಕಾರ ಮಾಡಿ ಹೊಸಪೇಟೆಯಲ್ಲಿ ನನಗೂ ಭೇಟಿ ಆಗಿದ್ದೀರಿ. ಅದರ ಮಾರನೆಯ ದಿವಸ ತಾವು ಒಂದು ಮಾತು ಕೊಟ್ಟಿದ್ದೀರಿ. ಪ್ರವಾಹ ಪೀಡಿತ ಪ್ರದೇಶದ ಎಲ್ಲಾ ರೈತರ ಅಲ್ಪಾವಧಿ ಸಾಲವನ್ನು ದೀರ್ಘಾವಧಿ, ಸಾಲವನ್ನಾಗಿ ಪರಿವರ್ತನೆ ಮಾಡಿದ್ದೇವೆ ಎಂದು ಹೇಳಿದ್ದೀರಿ. ಈಗ ನನ್ನ ಕೈಯಲ್ಲಿ ವಸೂಲಿ ಪತ್ರ ಇದೆ, ವಸೂಲಿ ನಡೆಯುತ್ತಾ ಇದೆ. ಸಿಂಧನೂರು ತಾಲ್ಲೂಕಿನ ಅಟ್ಯಾಚ್‌ಮೆಂಟ್ ಆಫ್ ಇಮ್ಮೂವಬಲ್ ಪ್ರಾಪರ್ಟಿಯ ನೋಟೀಸ್ ತಮಗೆ ಕಳಿಸಿಕೊಡುತ್ತಿದ್ದೇನೆ. ನೀವು ಚರ್ಚೆ ಮಾಡಿ, ಸೋಮವಾರ. ಬಡ್ಡಿ ರದ್ದು ಮಾಡುತ್ತೀರೋ ಸುಸ್ತಿ ಬಡ್ಡಿ ರದ್ದು ಮಾಡುತ್ತೀರೋ ಅವೆಲ್ಲಾ ಇರಲಿ. ವಸೂಲಿಯನ್ನು ಮೊದಲು ನಿಲ್ಲಿಸಬೇಕು. ಆ ಕೆಲಸವನ್ನು ದಯವಿಟ್ಟು ಮೊದಲು ಮಾಡಿ.

ಶ್ರೀ ಆರ್.ಎಲ್. ಜಾಲಪ್ಪ:– ಮಾನ್ಯ ಅಧ್ಯಕ್ಷರೆ, ರಾಜ್ಯದ ರೈತರಿಗೆ ಬಹುಶಃ ಶನಿ ಮಹಾರಾಯನ

ಕಾಟ ಜಾಸ್ತಿ ಆದ ಹಾಗೆ ಕಾಣುತ್ತದೆ. ಒಂದು ಕಡೆ ಗೊಬ್ಬರದ ಬೆಲೆ ಜಾಸ್ತಿ ಆಯಿತು. ಇನ್ನೊಂದು ಕಡೆ ನೀರು ಇದ್ದರೂ ಬಾವಿಯಲ್ಲಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ವಿದ್ಯುತ್ ಇಲ್ಲ. ಮೂರನೆಯದಾಗಿ ಬೆಲೆಗಳು ಕುಸಿದು ಹೋಗುತ್ತಾ ಇವೆ. ಈಗಾಗಲೇ ಪತ್ರಿಕೆಯಲ್ಲಿ ಬಂದಿದೆ. ಮುಸುಕಿನ ಜೋಳ 180 ರೂಪಾಯಿ ರೇಟ್ ಆಗಿದೆ ಅದಕ್ಕೆ. ಹೋದ ವರ್ಷ ಸುಮಾರು 450–500 ರೂಪಾಯಿ ಇದ್ದ ಜೋಳ ಇವತ್ತು 180 ರೂಪಾಯಿಗೆ ಬಂದಿದೆ. ಇದರ ಜೊತೆಗೆ ಈ ಹುಳುಗಳ ಕಾಟ ಜಾಸ್ತಿ ಆಯಿತು. ತೊಗರಿ ಬೇಳೆಯಲ್ಲಾ ಹಾಳಾಯಿತು. ಮಾನ್ಯ ಮುಖ್ಯ ಮಂತ್ರಿಗಳು ಅಲ್ಲಿಗೆ ಹೋದಾಗ ನಮ್ಮ ರಾಜ್ಯದ ರೈತರಿಗೆ ಶನಿ ಕಾಟ ಜಾಸ್ತಿ ಆಯಿತು ಒಂದು ಕಡೆ ಗೊಬ್ಬರದ ಬೆಲೆ ಜಾಸ್ತಿ ಆಯಿತು, ಪರ್ಚೇಸ್ ಮಾಡುವ ಶಕ್ತಿ ನಮಗೆ ಇವತ್ತಿನ ದಿವಸ ಇಲ್ಲ. ಎರಡನೆಯದಾಗಿ ಈ ನೀರು ಬೋರ್‌ವೆಲ್‌ನಲ್ಲಿದೆ. ಅದನ್ನು ಉಪಯೋಗಿಸುವುದಕ್ಕೆ ನಮ್ಮಲ್ಲಿ ವಿದ್ಯುತ್ ಶಕ್ತಿ ಇಲ್ಲ. ಮೂರನೆಯದಾಗಿ ಧಾರಣೆ ಇವತ್ತು ಕುಸಿಯುತ್ತಿದೆ. ನಾಲ್ಕನೆಯದಾಗಿ ಈ ಪೈರುಗಳಿಗೆ ವಿಪರೀತ ರೋಗ ಜಾಸ್ತಿ ಆಗಿದೆ. ನಮ್ಮ ಜೀವನ ವಿಪರೀತ ಕಷ್ಟ ಆಗಿದೆ. ಏನು ಬಡ್ಡಿ ಸುಸ್ತಿ ಬಡ್ಡಿ ವಜಾ ಮಾಡುವುದರಿಂದ ಅದರಿಂದ ಏನೂ ಬಹಳ ಉದ್ಧಾರವಾಗುವುದಿಲ್ಲ. ಆದರೆ ಸ್ವಲ್ಪ ರಿಲೀಫ್ ಸಿಗುತ್ತದೆ, ಮತ್ತು ತಮಗೆ ರಿಕವರಿ ಜಾಸ್ತಿ ಆಗುತ್ತದೆ. ಈ ಎಕ್ಸ್‌ಪರಿಮೆಂಟನ್ನು ನಾನು ಸಹಕಾರಿ ಮಂತ್ರಿಯಾಗಿದ್ದಾಗ ಮಾಡಿದ್ದೇನೆ. ಅವತ್ತಿನ ದಿವಸ ನಬಾರ್ಡ್‌ನವರನ್ನು ಒಪ್ಪಿಸಿ ಎರಡು ವರ್ಷಗಳ ಕಾಲ ಈ ಬಡ್ಡಿ ಸುಸ್ತಿ ಬಡ್ಡಿ ಎಲ್ಲಾ ವಜಾ ಮಾಡಿಸಿದ್ದೆವು. ಏಳು ರೂಪಾಯಿ ಬಡ್ಡಿಗೆ ನಾವು ಸಾಲವನ್ನು ಒದಗಿಸಿದ್ದೆವು. ಆದರೆ ಎರಡೂ ಸರ್ಕಾರ ನಿಮ್ಮದೇ ಇದೆ, ಕೇಂದ್ರ ಸರ್ಕಾರವೂ ನಿಮ್ಮದೇ ಇದೆ, ರಾಜ್ಯ ಸರ್ಕಾರವೂ ನಿಮ್ಮದೇ ಇದೆ. ನಮಗೆ ಬಹಳಷ್ಟು ವಿರೋಧ ಇತ್ತು. ನಬಾರ್ಡ್‌ನವರ ವಿರೋಧ ಇದ್ದರೂ ಕೇಂದ್ರ ಸರ್ಕಾರದವರಿಂದ ಇದ್ದರೂ ಸಹ ನಮ್ಮ ಸರ್ಕಾರ ಇದ್ದಾಗ ಈ ಸೌಲಭ್ಯಗಳನ್ನು ಕೊಟ್ಟಿತ್ತು. ದಯಮಾಡಿ ಇದನ್ನು ಗಮನದಲ್ಲಿಟ್ಟುಕೊಂಡು ಅಲ್ಪಸ್ವಲ್ಪ ಸೌಲಭ್ಯವನ್ನು ಒದಗಿಸಬೇಕು.

ಅಧ್ಯಕ್ಷರು:– ಚರ್ಚೆ ಶುರು ಮಾಡಿದಿರಿ.

ಶ್ರೀ ವೈ.ಕೆ. ರಾಮಯ್ಯ:– ಚರ್ಚೆ ಇಲ್ಲ ಸನ್ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು:– ಬನ್ನಿಕೋಡ್ ಅವರೆ ಕುಳಿತುಕೊಳ್ಳಿ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೇ, ವೈಯಕ್ತಿಕವಾಗಿ ನಾನೂ ಕೂಡ. ಫಲಾನುಭವಿ ಇದ್ದೇನೆ. ರೈತರು ಏನು ಸಾಲ ತೆಗೆದುಕೊಂಡಿದ್ದಾರೆ. ಅದಕ್ಕೆ ಬಡ್ಡಿ ಮನ್ನಾ ಮಾಡಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಪ್ರಾರ್ಥನೆ ಮಾಡುವಾಗ ಇದರಲ್ಲಿ ಒಂದು ತಾಂತ್ರಿಕವಾದ ತೊಡಕು ಇದೆ. ಅದನ್ನು ಸಹ ಪರಿಶೀಲನೆ ಮಾಡಬೇಕು. ನಾವು ಸಾಲ ತೆಗೆದುಕೊಳ್ಳುವಾಗ ಐದು ಪರ್ಸೆಂಟ್ ಮಾತ್ರ ಬಡ್ಡಿ ಕೊಡುತ್ತೇವೆಂದು ಒಂದು ನಿಬಂಧನೆಯನ್ನು ಹಾಕಿ ಅಗ್ರಿಮೆಂಟ್ ಬರೆದು ಕೊಟ್ಟಿದ್ದೇವೆ. 7 ಪರ್ಸೆಂಟ್, ಐದು ಪರ್ಸೆಂಟ್‌ನ್ನು ಮೊದಲಿನಿಂದ ಸರ್ಕಾರ ಹೊತ್ತುಕೊಂಡು ಬಂದಿದೆ. ನಾವು ಅಗ್ರಿಮೆಂಟಿಗೆ ರುಜು ಮಾಡುವಾಗ ಏಳು ಪರ್ಸೆಂಟ್ ಮಾತ್ರ ಕೊಡುತ್ತೇವೆ ಎಂದು ಒಪ್ಪಿಕೊಂಡಿದ್ದೆವು. ಏಳು ಪರ್ಸೆಂಟ್ ಕೊಟ್ಟುಕೊಂಡು ಬಂದಿದ್ದೇವೆ. ಟ್ರಾಕ್ಟರ್ ಲೋನ್‌ಗಳನ್ನು. ಈಗ ನೀವು ಅದಕ್ಕಿಂತ ಜಾಸ್ತಿ ವಸೂಲು ಮಾಡುವುದಕ್ಕೆ ಬಂದರೆ ಕಾನೂನಿನ ತೊಡಕು ಕೂಡ ಬರುತ್ತದೆ. We have agreed to pay only 7%. Government have been recovering only 7%. so far. So now there is no question of recovering 12% instead of 7%.

ಅದನ್ನು ಮಾಡಲಿಕ್ಕೆ ಸಾಧ್ಯವೂ ಇಲ್ಲ. because there is an agreement between the farmer and the Government. ಆದರಿಂದ ಈ ಏಳು ಪರ್ಸೆಂಟ್ ಏನು ಇದೆ. ಅದರಲ್ಲಿ 5 ಪರ್ಸೆಂಟ್ ಮೊದಲಿನಿಂದಲೂ ಸರ್ಕಾರ ಕೊಟ್ಟುಕೊಂಡು ಬಂದಿದೆ. ಅದನ್ನು ಕೊಡುವುದರ ಜೊತೆಗೆ

ಪೂರ್ತಿ ಬಿಡಲಿ ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಕಾನೂನಿನ ತೊಡಕನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ನೀವು 12 ಪರ್ಸೆಂಟ್ ರೆಕವರಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. because you entered into agreement to pay 7%. ಆ ದೃಷ್ಟಿಯಿಂದ ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, ನಾವು ಇವೊತ್ತು ಇದರ ಬಗ್ಗೆ ಚರ್ಚೆ ಮಾಡಿ, ಮಾನ್ಯ ಮುಖ್ಯಮಂತ್ರಿಯವರಿಗೆ ಒಂದೆರಡು ದಿವಸಗಳ ಕಾಲ ಸಮಯವನ್ನು ನಾವು ಕೊಡಬೇಕಾಗುತ್ತದೆ. ಇದಕ್ಕೆ ಅವರು ಬುಧವಾರ ಉತ್ತರಕೊಡಲಿ. ನಾವು ಕೆಲವು ವಿಚಾರಗಳನ್ನು ತಿಳಿಸಬೇಕಾಗುತ್ತದೆ. ನಾನು ಏನು ಹೇಳುತ್ತಿದ್ದೆನೆಂದರೆ, ಇಲ್ಲಿ ನಾವು ಈ ವಿಚಾರದಲ್ಲಿ ಯಾವುದೇ ರಾಜಕೀಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ, ಯಾವುದೇ ರಾಜಕೀಯ ಪಕ್ಷವೂ ಸಹ ಮಾಡುತ್ತಿಲ್ಲ. ನಮ್ಮ ಮುಖ್ಯವಾದ ಉದ್ದೇಶವೇನೆಂದರೆ, ರೈತ ಬಹಳ ಸಂಕಷ್ಟದಲ್ಲಿದ್ದಾನೆ. ಈ ರಾಜ್ಯದ ರೈತರಿಗೆ ಈ ವರ್ಷ ಬಂದಿರುವ ಕಷ್ಟ ತಮ್ಮ ಜೀವಮಾನದಲ್ಲಿ ಹಿಂದೆಂದೂ ಬಂದಿರಲಿಲ್ಲ. ಮಾನ್ಯ ಅಧ್ಯಕ್ಷರೆ, ಈ ವಿಚಾರ ತಮಗೂ ಚೆನ್ನಾಗಿ ಗೊತ್ತಿದೆ. ತಾವೂ ಸಹ ರೈತ ಕುಟುಂಬದಿಂದ ಬಂದಿದ್ದೀರಿ. ಇವೊತ್ತು ರೈತನನ್ನು ಕುರಿತು ಎಲ್ಲಾ ರಾಜಕೀಯ ಪಕ್ಷಗಳು ಏನೆಂದು ಹೇಳುತ್ತವೆ ? ನಾನು ಬರೀ ಕಾಂಗ್ರೆಸ್ ಎಂದು ಹೇಳುತ್ತಿಲ್ಲ, ಕಾಂಗ್ರೆಸ್ ಇರಬಹುದು, ಜನತಾ ದಳ ಇರಬಹುದು, ಎಸ್.ಜೆ.ಪಿ. ಇರಬಹುದು. ರೈತ ನಮ್ಮ ಪಕ್ಷದ ಬೆನ್ನೆಲುಬು, ಇದು ಕೃಷಿ ಪ್ರಧಾನವಾದ ದೇಶ, ನಾವು ರೈತರ ಏಳಿಗೆಗಾಗಿ ಪ್ರಯತ್ನ ಮಾಡಬೇಕು. ಎಲ್ಲಾ ರಾಜಕೀಯ ಪಕ್ಷಗಳು ಇದೆಲ್ಲವನ್ನೂ ಹೇಳಿದರೂ ಸಹ ಏನಾಗಿದೆಯೆಂದರೆ, ಕಳೆದ 3–4 ವರ್ಷಗಳಿಂದ ರಾಜ್ಯ ಸರ್ಕಾರ ರೈತರಿಗೆ ದುಡ್ಡು ಕೊಟ್ಟಿಲ್ಲ, ಅವರಿಗೆ ಯಾವುದೇ ರೀತಿಯಾದಂಥ ರಿಯಾಯಿತಿ ಇಲ್ಲ, ಯಾವ ತರಹದ ಸಹಾಯವಿಲ್ಲ. ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳಿದ್ದು, ಅವುಗಳಿಗೆ ನಾವು ಸಹಾಯ ಮಾಡುತ್ತೇವೆ, ಸಬ್ಸಿಡಿ ಕೊಡುತ್ತೇವೆ, ಜೊತೆಗೆ ಡೆವಲಪ್‌ಮೆಂಟ್ ಲೋನ್ ಸಹ ಕೊಡುತ್ತೇವೆ. ಒಂದು ವೇಳೆ ಕೈಗಾರಿಕೆಗಳು ರೋಗಗ್ರಸ್ತವಾದರೂ ಸಹ ಅವುಗಳಿಗೆ ಪುನಃ ಸಹಾಯ ಮಾಡಿ, ರಿಹ್ಯಾಬಿಲಿಟೇಷನ್ ಪ್ಯಾಕೇಜ್ ತೆಗೆದುಕೊಂಡು ಬರುತ್ತೀರಿ. ಕರ್ನಾಟಕದಲ್ಲಿ ಕೃಷಿರಂಗ ಅನಾರೋಗ್ಯವಾಗಿದೆ, ರೈತರ ಶಕ್ತಿ ಸಂಪೂರ್ಣ ಉಡುಗಿದೆ, ರೈತನಿಗೆ ಜೀವನ ಮಾಡುವುದು ಕಷ್ಟವಾಗಿದೆ. ಯಾರಿಗೆ ಒಪ್ಪೊತ್ತು ಗಂಜಿ ಸಿಗುವುದು ಕಷ್ಟವಾಗಿದೆಯೋ, ಯಾರಿಗೆ ಸಾಲದ ಭಾರ ಹೆಚ್ಚಾಗಿದೆಯೋ, ಇದರ ಪರಿಣಾಮವಾಗಿ ಕೃಷಿ ಉತ್ಪಾದನೆ ಕಡಿಮೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ Agriculture has to be as an Industry ಎಂದು ಪರಿಗಣಿಸಬೇಕಾಗಿತ್ತು.

ಯಾವ ಪ್ರಕಾರ ನಾವು ಕೃಷಿರಂಗವನ್ನು ಒಂದು ಕೈಗಾರಿಕೆ ಎಂದು ಭಾವಿಸುವುದಿಲ್ಲವೋ, ಆ ತರಹದ ಉತ್ತೇಜನ ಕೊಡುವುದಿಲ್ಲವೋ, ಅಲ್ಲಿಯ ತನಕ ರೈತರ ಏಳಿಗೆಯಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಕೇವಲ ಪೊಳ್ಳು ಘೋಷಣೆಗಳಾಗುತ್ತವಷ್ಟೆ. ಹಾಗಾಗಿ ಎಲ್ಲಾ ವಿರೋಧ ಪಕ್ಷದವರು ಹಾಗೂ ಕೆಲವು ಕಾಂಗ್ರೆಸ್ ಪಕ್ಷದ ಸ್ನೇಹಿತರು ಸರ್ಕಾರ ಸಾಲ ಮನ್ನಾ ಮಾಡುವುದು ಬಹಳ ಕಷ್ಟವಾಗಬಹುದು, ಕನಿಷ್ಠ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಸರ್ಕಾರ ಮನ್ನಾ ಮಾಡಬೇಕು ಎಂದು ಕೇಳಿದರು. ಈ ದೃಷ್ಟಿಯಿಂದ ಇದರ ಬಗ್ಗೆ ನಮಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ಕೃತಜ್ಞತೆ ಸಲ್ಲಿಸುತ್ತೇನೆ. ನೀವು ಗೊಬ್ಬರದ ದರವನ್ನು ಹೆಚ್ಚು ಮಾಡಿದ್ದೀರಿ, ಅದರಿಂದ ಗೊಬ್ಬರದ ಬಳಕೆ ಕಡಿಮೆಯಾಯಿತು, ಅಲ್ಲದೆ, ಕೃಷಿ ಉತ್ಪಾದನೆಯ ಮೇಲೂ ಪರಿಣಾಮವಾಯಿತು. ಕ್ರಿಮಿನಾಶಕಗಳ ಔಷಧಿ ದರ ಕೂಡ ಹೆಚ್ಚಾಗಿದೆ, ರೈತರಿಗೆ ಏನು ಸಿಗುತ್ತದೆ ? ಆತ ಏನು ಉತ್ಪಾದನೆ ಮಾಡುತ್ತಿದ್ದಾನೆ. ಅದಕ್ಕೆ ಸೂಕ್ತ ದರ ಇಲ್ಲ. ಮಾನ್ಯಮುಖ್ಯಮಂತ್ರಿಗಳು ನರಗುಂದದಲ್ಲಿದ್ದಾಗ ಜೋಳದ ಬೆಲೆ 140 ರೂಪಾಯಿಗಳಾಗಿವೆಯೆಂದು ಹೇಳಿದರು. ಇದರ ಬಗ್ಗೆ 15 ದಿವಸಗಳಲ್ಲಿ ನಾವು ನಿರ್ಣಯ ತೆಗೆದುಕೊಳ್ಳುತ್ತೇವೆಂದೂ ಸಹ ಹೇಳಿದರು. ಬೆಂಬಲ ಬೆಲೆ 240

ರೂಪಾಯಿಗಳಿದ್ದು, ಈಗ ಇಡುತ್ತಿದ್ದೀರಿ. ಬೆಂಬಲ ಬೆಲೆಯಿಂದ ಏನಾದರೂ ದರ ಕಡಿಮೆಯಾದರೆ ರೈತರಿಗೆ ಸಹಾಯ ಮಾಡುವುದಕ್ಕೆ 15 ದಿವಸದೊಳಗೆ ನಿರ್ಣಯ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಇವೊತ್ತು ಜೋಳದ ದರ 140 ರೂಪಾಯಿಗಳಾಗಿದೆ. ಸಪೋಟಾದ ಬೆಲೆ 240 ರೂಪಾಯಿಗಳಾಗಿದೆ. ಬೆಲೆಗಳು ಈ ರೀತಿಯಾಗಿದ್ದರೆ ಯಾರು ಖರೀದಿಸುತ್ತಾರೆ? ಮಾರ್ಕೆಟಿಂಗ್ ಫೆಡರೇಶನ್‌ನವರು ಖರೀದಿ ಮಾಡುತ್ತಾರೆಯೆ? ಸರ್ಕಾರ ಖರೀದಿ ಮಾಡುತ್ತದೆಯೇ? ಅಥವಾ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಖರೀದಿ ಮಾಡುತ್ತದೆಯೇ? ಯಾರೂ ಖರೀದಿ ಮಾಡುವುದಿಲ್ಲ. ಏಕೆಂದರೆ, ಯಾರಿಗೂ ಕೂಡ ರೈತರ ಬಗ್ಗೆ ಚಿಂತನೆ ಇಲ್ಲ. ಇವೊತ್ತು ಹತ್ತಿಯ ದರ ಇಳಿದಿದೆ, ಭತ್ತದ ಬೆಲೆ ಕಡಿಮೆಯಾಗಿದೆ, ರೇಷ್ಮೆ ಬೆಲೆಯೂ ಕೂಡ ಕಡಿಮೆಯಾಗಿದೆ. ರಾಜ್ಯದ ಎಲ್ಲಾ ಕಡೆಯಲ್ಲಿ ರೈತರು ಏನು ಉತ್ಪಾದನೆ ಮಾಡಿದ್ದಾರೆ, ಅದಕ್ಕೆ ಒಂದು ಸೂಕ್ತ ದರ ಇಲ್ಲ. ಮತ್ತೇನಾಗಿದೆ? ರೈತ ಏನು ಬೆಳೆಯುತ್ತಾನೆ, ಅದು ಹತ್ತಿ ಇರಬಹುದು, ಎಣ್ಣೆ – ಕಾಳುಗಳಿರಬಹುದು ಅಥವಾ ನಿಮ್ಮ paddy ಇರಬಹುದು, ಇವುಗಳ ದರಗಳೆಲ್ಲವೂ ಕಡಿಮೆಯಾಗಿರುವಾಗ ರೈತರು ಜೀವನ ಮಾಡುವುದಕ್ಕೆ ಹೇಗೆ ಸಾಧ್ಯವಿದೆ? ಇಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ನೀವು ರೈತರ ಸಹಾಯಕ್ಕೆ ಬಂದರೆ ರೈತ ನಿಮಗೆ ಆಶೀರ್ವಾದ ಮಾಡುತ್ತಾನೆ.

ಆ ಪುಣ್ಯವನ್ನು ನೀವು ಕಟ್ಟಿಕೊಳ್ಳಿ ಈ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮಾನ್ಯ ಮಾಡತಕ್ಕ ಕಾರ್ಯಕ್ರಮವನ್ನು ಸರ್ಕಾರದವರು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಈ ಸುಸ್ತಿಬಡ್ಡಿಗೆ ರಿಯಾಯಿತಿ ಕೊಡಬೇಕೆಂದು ನಾನು ರಾಜಕೀಯವಾಗಿ ಹೇಳುತ್ತಿಲ್ಲ. ತಮಗೆ ಗೊತ್ತಿರುವ ಹಾಗೆ ಭೀಕರವಾದ ಬರಗಾಲ ಇದೆ. ನಾನು ಇಡೀ ರಾಜ್ಯದ ಎಲ್ಲಾ ಕಡೆ, ಎಲ್ಲಾ ಜಿಲ್ಲೆಗಳಿಗೆ ಹೋಗಿ ಬಂದಿದ್ದೇನೆ. ಎಲ್ಲಾ ಕಡೆ ಬೆಳೆ ನಾಶವಾಗಿದೆ. ಅಲ್ಪಸ್ವಲ್ಪ ಬೆಳೆ ರೈತರಿಗೆ ಸಿಕ್ಕಿದ್ದರೂ ಸಹ ಅದಕ್ಕೆ ಬೆಲೆ ಇಲ್ಲ, ಬೆಲೆ ಸಂಪೂರ್ಣವಾಗಿ ಕುಸಿದುಹೋಗಿದೆ. ಅದರಲ್ಲಿ ನಿಮ್ಮ ಕೆ.ಇ.ಬಿ.ಯವರ ತೊಂದರೆ, ಇದರ ಬಗ್ಗೆ ಬೈರೇಗೌಡರು ಚೆನ್ನಾಗಿ ಹೇಳುತ್ತಾರೆ. ಆದರೆ ತಾವು ಲೋ ಓಲ್ಟೇಜ್‌ನಿಂದ ರೈತರ ಪಂಪುಸೆಟ್ಟು ಸುಟ್ಟುಹೋಗಿ ಎಷ್ಟು ನಷ್ಟವಾಗಿದೆ, ಎಷ್ಟು ಪಂಪುಸೆಟ್ಟುಗಳು ಸುಟ್ಟುಹೋಗಿದೆ ಎಂಬ ಬಗ್ಗೆ ಲೆಕ್ಕ ಹಾಕಬೇಕು. ಇದರಿಂದ ಎಷ್ಟು ರೈತರು ಕಷ್ಟದಲ್ಲಿದ್ದಾರೆ ಎನ್ನುವುದನ್ನು ಲೆಕ್ಕ ಮಾಡಬೇಕು. ನೀವು ರೈತರಿಗೆ ಏನು ರಿಯಾಯಿತಿ ಕೊಡುತ್ತೀರಿ ಅದಕ್ಕಿಂತಾ ರೈತರಿಗೆ ಹೆಚ್ಚು ನಷ್ಟ ಕೆ.ಇ.ಬಿ.ಯಿಂದ ಆಗಿದೆ. ಒಂದು ಕಡೆ ಭೀಕರವಾದ ಬರಗಾಲವಾಯಿತು. ಮತ್ತೊಂದು ಕಡೆ ಬೆಲೆ ಕುಸಿದು ಬಿದ್ದಿದೆ. ಇನ್ನೊಂದು ಕಡೆ ಕೆ.ಇ.ಬಿ.ಯಿಂದ ಅನಾಹುತ, ಇದಾದ ನಂತರ ರಾಜ್ಯದ ಇತಿಹಾಸದಲ್ಲಿ ಎಂದೂ ಆಗಿಲ್ಲದಂಥ ದೊಡ್ಡ ನೆರೆಹಾವಳಿ, ಎಲ್ಲಾ ಬೆಳೆಗಳು, ದನಕರುಗಳು, ಪಂಪುಸೆಟ್ಟುಗಳು ಅದರಲ್ಲಿ ಕೊಚ್ಚಿ ಹೋಗಿವೆ. ಸರ್ಕಾರ ಕೆಲವು ರಿಯಾಯಿತಿಗಳನ್ನು ಕೊಡುವ ಪ್ರಯತ್ನ ಮಾಡಿದೆ, ಆದರೂ ಸಹ ಸಾವಿರಾರು ಕೋಟಿ ರೂಪಾಯಿಗಳ ಹಾನಿಯಾಗಿದ್ದಾಗ 50–60 ಕೋಟಿ ಪರಿಹಾರವನ್ನು ಬಿಡುಗಡೆ ಮಾಡುವುದರಿಂದ ಏನು ಪ್ರಯೋಜನ? ಆ ಪರಿಹಾರವು ಸಹ ರೈತರಿಗೆ ಮುಟ್ಟಿಲ್ಲ. ಹಾಗಾಗಿ ಇವತ್ತು ನೆರೆಹಾವಳಿ, ವಿದ್ಯುತ್ ತೊಂದರೆ, ಬರಗಾಲ ಮುಂತಾದವುಗಳಿಂದಾಗಿ ನಮ್ಮ ರೈತ ಕಂಗಾಲಾಗಿದ್ದಾನೆ, ಕ್ಷೀಣವಾಗಿದ್ದಾನೆ, ಇಂಥ ಸಂದರ್ಭದಲ್ಲಿ ಸರ್ಕಾರ ಅವನಿಗೆ ಸಹಾಯ ಮಾಡದಿದ್ದರೆ ಇನ್ನು ಯಾವಾಗ ಮಾಡುತ್ತದೆ? ಇದು ನಿಮಗೆ ಒಂದು ರೀತಿಯಲ್ಲಿ ಪರೀಕ್ಷೆ ಇದ್ದಂತೆ, ಇದರಲ್ಲಿ ನೀವು ಉತ್ತೀರ್ಣರಾಗಬೇಕು, ಆ ರೀತಿ ಆಗಬೇಕಾದರೆ ರೈತರಿಗೆ ನೀವು ನಮ್ಮ ಬೆನ್ನೆಲುಬು, ನಿಮಗೆ ನಾವು ಸಹಾಯ ಮಾಡುತ್ತೇವೆಂದು ಹೇಳಬೇಕಾಗುತ್ತದೆ. ಅದನ್ನು ಬಿಟ್ಟು ನೀವು ನಬಾರ್ಡ್‌ಗೆ ವಿರೋಧ ಮಾಡುತ್ತಿದ್ದೀರಿ, ನಬಾರ್ಡ್‌ನಿಂದ ಏನು ವಿರೋಧವಿದೆ ಅದು ಈ ಸದನ ಒಂದಾದರೆ ನಡೆಯುವುದಿಲ್ಲ. ಆ ಬಡ್ಡಿ ಮತ್ತು ಸುಸ್ತಿ ಬಡ್ಡಿಗೆ ರಿಯಾಯಿತಿ ಕೊಡಬೇಕಾದರೆ ಅದಕ್ಕೆ ಬೇರೆ ಹೆಸರನ್ನು ಇಡಿ. ತಾವು 1991ರಲ್ಲಿ ಯಾವ ಹಿತದೃಷ್ಟಿಯಿಂದ ಯೋಜನೆಯನ್ನು ತಂದಿರೋ ಅದನ್ನು ನಮ್ಮ ಕಾಲದಲ್ಲೇ

ತಂದಿದ್ದೆವು. ಮಾನ್ಯ ಜಾಲಪ್ಪನವರು ಸಹಕಾರಿ ಮಂತ್ರಿಗಳಾಗಿದ್ದಾಗ ಶ್ರೀರಾಮಕೃಷ್ಣಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ನಾವು ಆ ಒಂದು ಸ್ಕೀಮ್‌ನ್ನು ಹೊಸದಾಗಿ ತಂದೆವು. ನಾವು ನೇರವಾಗಿ ರಿಯಾಯಿತಿ ಕೊಡುತ್ತಿದ್ದೆವು. ಆದರೆ ನೀವು ೭ ಪರ್‌ಸೆಂಟನ್ನು ಪಸೂಲಿ ಮಾಡುತ್ತಿದ್ದೀರಿ. ಕೇರಳದಲ್ಲಿ ಈ ಪದ್ಧತಿ ಇದೆ, ಅದನ್ನು ಮಾಡುತ್ತಿದ್ದೀರಿ. ರೈತರ ಹಿತದೃಷ್ಟಿಯಿಂದ ರಿಯಾಯಿತಿ ಕೊಡಬೇಕೆಂದು ನಾವು ಈ ಸದನದಲ್ಲಿ ಹೇಳುತ್ತಿದ್ದೇವೆಯೇ ವಿನಾ ಇನ್ನೇನನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಈ ರೀತಿಯಾದ ಪ್ರಾಕೃತಿಕ ವಿಕೋಪದಿಂದಾಗಿ ಮತ್ತು ಕೆ.ಇ.ಬಿ.ಯಿಂದ ಹಾಗೂ ಸರ್ಕಾರದಿಂದಾಗಿ ಉತ್ಪಾದನೆಯಲ್ಲಿ ಎಷ್ಟು ತೊಂದರೆಯಾಗಿದೆ ಎಂದರೆ 1990–91ರಲ್ಲಿ ಫರ್ಟಿಲೈಸರ್‌ನ ಗುರಿ 73 ಲಕ್ಷ ಟನ್ ಇತ್ತು. ಆದರೆ ಸಾಧನೆ ಮಾಡಿದ್ದು 57 ಲಕ್ಷ ಟನ್ನುಗಳು. 1991–92ರಲ್ಲಿ ಗುರಿ 77.48 ಲಕ್ಷ ಟನ್‌ಗಳು ಗುರಿ ಮುಟ್ಟಿದ್ದು 72 ಲಕ್ಷ ಟನ್ನುಗಳು. 1992–93ರಲ್ಲಿ ಗುರಿ 75.50 ಲಕ್ಷ ಟನ್ನುಗಳು. ಗುರಿ ತಲುಪಿದ್ದು 68.94 ಲಕ್ಷ ಟನ್ನುಗಳು. ಪಲ್‌ಸಸ್‌ನಲ್ಲಿ 1990–91ರಲ್ಲಿ ಗುರಿ 7 ಲಕ್ಷ ಟನ್ನುಗಳು, ಗುರಿ ಮುಟ್ಟಿದ್ದು 5.39 ಲಕ್ಷ ಟನ್ನು. 1991–92ರಲ್ಲಿ ಗುರಿ 7.57 ಲಕ್ಷ ಟನ್ನು, ಸಾಧನೆ ಮಾಡಿದ್ದು 8 ಲಕ್ಷ ಟನ್ನು, ಇಲ್ಲಿ ಸ್ವಲ್ಪ ಜಾಸ್ತಿ ಆಗಿದೆ. 1992–93ರಲ್ಲಿ ಗುರಿ 8.30 ಲಕ್ಷ ಟನ್ನು ಗುರಿ ಮುಟ್ಟಿದ್ದು 8 ಲಕ್ಷ ಟನ್ನು ಅಂದರೆ ಪ್ರತಿಯೊಂದು ಹಂತದಲ್ಲಿ ಅದು ಸಿರೀಲ್ಸ್ ಇರಲಿ, ಪಲ್‌ಸಸ್ ಇರಲಿ, ಆಯಿಲ್ ಸೀಡ್ಸ್ ಇರಲಿ, ಕಾಟನ್ ಇರಲಿ, ಟೊಬ್ಯಾಕೊ ಇರಲಿ, ಎಲ್ಲಾ ಕಡೆಯೂ ಕಳೆದ ನಾಲ್ಕು ವರ್ಷಗಳಲ್ಲಿ ಕರ್ನಾಟಕದಲ್ಲಿ ವ್ಯವಸಾಯದ ಉತ್ಪಾದನೆ ವಿಫಲವಾಗಿದೆ. ಇದಕ್ಕೆ ಮುಖ್ಯ ಕಾರಣವೇನೆಂದರೆ ಬರಗಾಲ, ನೆರೆಹಾವಳಿ ಏಲ್ಲಕ್ಕಿಂತ ಮುಖ್ಯವಾದ ಕಾರಣವೇನೆಂದರೆ ರೈತರಿಗೆ ಗೊಬ್ಬರವನ್ನು, ಔಷಧಿಗಳನ್ನು ಕೊಂಡುಕೊಳ್ಳತಕ್ಕ ಶಕ್ತಿ ಉಳಿದಿಲ್ಲ, ಅವರಿಗೆ ಸಾಲದ ಹೊರೆ ಹೆಚ್ಚಾಗಿದೆ.

ಇನ್ನೊಂದು ವಿಚಾರ ಕೋ ಆಪರೇಟಿವ್ ಮೂವ್‌ಮೆಂಟ್‌ನಲ್ಲಿ ಶಾರ್ಟ್ ಟರ್ಮ್ ಲೋನ್‌ನಲ್ಲಿ ಇವತ್ತಿನವರೆಗೂ ರಿಕವರ್ ಆಗಿಲ್ಲ. ನಾನು ತಮಗೆ ಅಂಕಿಅಂಶಗಳನ್ನು ಕೊಡುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ 49.19 ಲಕ್ಷ ಕೃಷಿ ಕುಟುಂಬಗಳಿವೆ. ಪಿ.ಎಲ್.ಡಿ. ಸೊಸೈಟಿಯಲ್ಲಿ ಸದಸ್ಯತ್ವ ಇರುವುದು 34.58ಲಕ್ಷ. 1990-91ರಲ್ಲಿ ಬಾರೋಯಿಂಗ್ ಮೆಂಬರ್‌ಷಿಪ್ 3,34,818ಅಂದರೆ ಮೆಂಬರ್‌ಷಿಪ್-ಬಾರೋಯಿಂಗ್ ರೇಷಿಯೋ 6.63 ಪರ್ಸೆಂಟ್. ಕೇವಲ ಇಷ್ಟು ಜನರಿಗೆ ಇಷ್ಟು ಹಣ. ಎಲ್ಲಾ ಬ್ಯಾಂಕ್‌ಗಳೂ ತಮ್ಮ ಎಲಿಜಿಬಿಲಿಟಿಯನ್ನು ಕಳೆದುಕೊಂಡಿವೆ. ಪ್ರಾಥಮಿಕ ಸಂಘಗಳೂ ತಮ್ಮ ಎಲಿಜಿಬಲಿಟಿಯನ್ನು ಕಳೆದುಕೊಂಡಿವೆ. ಇದೇ ರೀತಿ ಪಿ.ಎಲ್.ಡಿ. ಬ್ಯಾಂಕ್‌ಗಳೂ ಕೂಡ. ಈ ಬ್ಯಾಂಕ್‌ನವರು ಬೇರೆ ರೈತರಿಗೆ ಹೊಸದಾಗಿ ಸಾಲವನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಎಲ್ಲಿಯವರೆಗೆ ಬ್ಯಾಂಕ್‌ಗಳು ಎಲಿಜಿಬಿಲಿಟಿಯನ್ನು ಪಡೆದುಕೊಳ್ಳುವುದಿಲ್ಲ ಅಲ್ಲಿಯವರೆಗೂ ರೈತರಿಗೆ ಹೊಸ ಸಾಲ ಸಿಕ್ಕುವುದಿಲ್ಲ. ಇದುವರೆಗೂ ಯಾವ ರೈತ ಸಾಲವನ್ನು ತೆಗೆದುಕೊಂಡಿಲ್ಲ ಅವನಿಗೂ ಕೂಡ ಸಾಲ ಸಿಕ್ಕುತ್ತಿಲ್ಲ. ಬಹಳ ಜನ ಬಡ ರೈತರು, ಎಸ್.ಸಿ ಎಸ್.ಟಿ.ಗಳು, ಹಿಂದುಳಿದ ವರ್ಗದವರು ಈ ಬ್ಯಾಂಕ್‌ಗಳಿಗೆ ಸದಸ್ಯರಾಗಿದ್ದಾರೆ. ಅವರಿಗೆ ಸಾಲ ಸಿಕ್ಕುತ್ತಿಲ್ಲ. ಏಕೆಂದರೆ ಬ್ಯಾಂಕ್‌ಗಳಲ್ಲಿ ಎಲೆಜಬಿಲಿಟಿ ಹೋಗಿದೆ. ಇದರ ಪರಿಣಾಮವಾಗಿ ಅಗ್ರಿಕಲ್ಚರ್ ಪ್ರೊಡಕ್ಷನ್ ಕುಂಠಿತವಾಗಿದೆ. ಸದಸ್ಯರಾಗಿರುವವರು ಡಿಫಾಲ್ಟರ್ ಆಗಿರುವುದರಿಂದ ಬ್ಯಾಂಕ್ ಮತ್ತು ಸೊಸೈಟಿಗಳಲ್ಲಿ ಸದಸ್ಯರಿಗೆ ಸಾಲ ಸಿಕ್ಕುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ತಮ್ಮ ವಾದವನ್ನು ಒಪ್ಪಿಕೊಂಡಿದ್ದೇನೆ. ಸಹಕಾರಿ ರಂಗದಲ್ಲಿ ತಮಗೆ ಹೆಚ್ಚಿನ ಆಸಕ್ತಿ, ಅನುಭವ ಹಾಗೂ ಮಾಹಿತಿ ಇದೆ. ನಾನು ಒಂದು ಮಾತನ್ನು ಹೇಳುವುದಾದರೆ ಕ್ಯಾಷ್ ಕಾರ್ಡ್ ಬ್ಯಾಂಕ್ ಹುಟ್ಟಿ 63ವರ್ಷವಾಯಿತು. ಅಂದರೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್, ಇಷ್ಟು ವರ್ಷಗಳಲ್ಲಿ ಅವರು ಕೊಟ್ಟಿರತಕ್ಕ ಸಾಲ 900 ಕೋಟಿ ರೂ. ಇದರಲ್ಲಿ 9 ಲಕ್ಷ ರೈತರಿಗೆ ಕೊಟ್ಟಿದ್ದಾರೆ. ಈ 9 ಲಕ್ಷದಲ್ಲಿ ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್ ಸುಮಾರು 3.5 ಲಕ್ಷ ಜನ. ಇಷ್ಟು ಜನರಿಗೆ ಸುಮಾರು 250 ಕೋಟಿ ರೂ. ಕೊಟ್ಟಿದ್ದೀರಿ. ಇನ್ನುಳಿದ ಐದೂವರೆ ಲಕ್ಷ

ಅದೇ ಪ್ರಕಾರ ಲಾಂಗ್ ಟರ್ಮ್‌ನಲ್ಲಿ ಪ್ರಿನ್ಸಿಪಲ್ ಅಮೌಂಟ್ 67.34 ಕೋಟಿ ರೂಪಾಯಿಗಳು. ಅದರ ಮೇಲೆ 48 ಕೋಟಿ ರೂಪಾಯಿ ಇಂಟರೆಸ್ಟ್ ಕೊಡಬೇಕಾಗುತ್ತದೆ. 175 ಕೋಟಿ ರೂಪಾಯಿಗಳನ್ನು ರೈತರಿಗೆ ನೀವು ರಿಯಾಯಿತಿ ಕೊಟ್ಟರೆ, You will be recovering about Rs. 500 crores. ನೀವು 500 ಕೋಟಿ ರೂಪಾಯಿ ರಿಕವರಿ ಮಾಡಿ you are bringing strength to the PLD Banks, you are bringing strength to the Primary Societies, there by eligibility will come. You will be covering maximum number of farmers. Your agricultural production will go up. Your revenues will be generated, ನಮ್ಮ ಇಚ್ಛೆ ಏನಿದೆ ಎಂದರೆ 6 ತಿಂಗಳು ಟೈಂ ಕೊಟ್ಟು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– 175 ಕೋಟಿ ರೂಪಾಯಿಗಳನ್ನು ಕೊಡುವುದರಿಂದ, out of 65 lakh farmers, how many farmers will be benefitted?

SRI R.V. DESHPANDE:– That particular figure, somehow I will give. There are two benefits. One is, these beneficiaries will be benefitted. ಇದರಿಂದ ಎಲೆಜಿಬಿಲಿಟಿ ಬಂದು ಇವತ್ತಿನವರೆಗೆ ಯಾರಿಗೆ ಸಾಲ ಸಿಕ್ಕಿಲ್ಲ ಅವರಿಗೆ ಸಾಲ ಸಿಕ್ಕುತ್ತದೆ. ಅದರಿಂದ Agricultural produtction will go up. With the result, revenues will also go up. That also we have to think. ನನ್ನ ಇಚ್ಛೆ ಏನಿದೆ ಎಂದರೆ 6 ತಿಂಗಳು ಟೈಂ ಕೊಡಬಹುದು. You can mutually agree on this. ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿ. ಸುಸ್ತಿ ಬಡ್ಡಿ ನಿಮ್ಮ ಜವಾಬ್ದಾರಿಗೆ ಬರುವುದಿಲ್ಲ. There is no liability for Susthi Baddi. ಇವತ್ತಿನ ದಿವಸ ಸುಸ್ತಿ ಬಡ್ಡಿಯನ್ನು ಸೊಸೈಟಿಯವರು ಮುಗಿದುಕೊಳ್ಳುತ್ತಾರೆ. ಸುಸ್ತಿ ಬಡ್ಡಿ ಸರ್ಕಾರದವರ ಜವಾಬ್ದಾರಿಗೆ ಬರುವುದಿಲ್ಲ. ನಮ್ಮ ಕಾಲದಲ್ಲಿ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿದ್ದೆವು. ಏಕೆಂದರೆ ಇದು ಎಕ್ಸ್‌ಟ್ರಾ ಹಣ. ಅದು ಲಾಭದ ಹಣ ಅಲ್ಲ; ಪೀನಲ್ ಹಣ. ಪೀನಲ್ ಹಣವನ್ನು ವಸೂಲ್ಮಾಡುವ ಅವಶ್ಯಕತೆ ಇಲ್ಲ. ಹಾಗಾಗಿ ಆ ಜವಾಬ್ದಾರಿ ನಿಮಗೆ ಬರುವುದಿಲ್ಲ. ನಿಮ್ಮ ಜವಾಬ್ದಾರಿ ಬರುವುದು ಇಂಟರೆಸ್ಟ್ ಅಷ್ಟೆ. ರಿಕವರಿ ಎಷ್ಟು ಫಾಲ್ ಆಗುತ್ತಿದೆ ಎಂದರೆ ಒಂದು ಕಾಲದಲ್ಲಿ ರಾಜ್ಯದಲ್ಲಿ 70 ಪರ್ಸೆಂಟ್ ರಿಕವರಿ ಇತ್ತು. ಇವರು ಅಧಿಕಾರಕ್ಕೆ ಬಂದ ನಂತರ ರಿಕವರಿ 1990–91ರಲ್ಲಿ ಷಾರ್ಟ್ ಟರ್ಮ್ ಲೋನ್ ರಿಕವರಿ ಆದದ್ದು 26.50 ಪರ್ಸೆಂಟ್, ಮೀಡಿಯಂ ಟರ್ಮ್ ಲೋನ್ 40.71 ಪರ್ಸೆಂಟ್, ಲಾಂಗ್ ಟರ್ಮ್ ಲೋನ್ 32 ಪರ್ಸೆಂಟ್. 1991–92ರಲ್ಲಿ ಷಾರ್ಟ್ ಟರ್ಮ್ ಲೋನ್ 51.41 ಪರ್ಸೆಂಟ್, ಮೀಡಿಯಂ ಟರ್ಮ್‌ಲೋನ್ 33 ಪರ್ಸೆಂಟ್, ಲಾಂಗ್‌ಟರ್ಮ್‌ಲೋನ್ 37 ಪರ್ಸೆಂಟ್. ಈ ವರ್ಷ ಜನವರಿಯವರೆಗೆ ಷಾರ್ಟ್ ಟರ್ಮ್ ಲೋನ್ ರಿಕವರಿ 12 ಪರ್ಸೆಂಟ್. ಮೀಡಿಯಂ ಟರ್ಮ್‌ಲೋನ್ 14.75 ಪರ್ಸೆಂಟ್, ಲಾಂಗ್ ಟರ್ಮ್ ಲೋನ್ 13 ಪರ್ಸೆಂಟ್ ಈ ವರ್ಷ ನಿಮ್ಮ ರಿಕವರಿ 13 ಪರ್ಸೆಂಟ್ ಮೇಲೆ ಹೋಗಿಲ್ಲ..15–20 ಪರ್ಸೆಂಟ್ ಮೇಲೆ ಹೋಗುವುದಿಲ್ಲ. ಏತಕ್ಕೆಂದರೆ ರೈತನಿಗೆ ಶಕ್ತಿ ಉಳಿದಿಲ್ಲ. ಇದು ಪ್ರೊ. ನಂಜುಂಡಸ್ವಾಮಿ ಮತ್ತಿತರ ಎಲ್ಲರೂ ಹೇಳಿದ ಹಾಗೆ ರಿಕವರಿ ಮಾಡಬೇಡಿ, ಒಂದು ನಿರ್ಣಯ ತೆಗೆದುಕೊಳ್ಳಿ. ಇವತ್ತೇ ನಿರ್ಣಯ ತೆಗೆದುಕೊಂಡು ಬುಧವಾರ ಉತ್ತರಕೊಡಿ. ನಿಮ್ಮ ಉದ್ದೇಶ ರೈತರಿಗೆ ಸಹಾಯ ಮಾಡುವುದು ಇದ್ದರೆ ರಿಕವರಿ ಏತಕ್ಕೆ ಮಾಡುತ್ತೀರಿ ? ಅದರ ಬಗ್ಗೆ ಇವತ್ತೇ ಆಜ್ಞೆ ಹೊರಡಿಸಿ ರಿಕವರಿ ಸ್ಟಾಪ್ ಮಾಡುವ ಕೆಲಸ ಆಗಬೇಕು. ಸ್ಟಾಪ್ ಮಾಡದಿದ್ದರೆ ರೈತರಿಗೆ ಹೇಗೆ ನೀವು ಸಹಾಯ ಮಾಡುತ್ತೀರಿ ? ರೈತರು ಬಹಳ ಕಷ್ಟದಲ್ಲಿದ್ದಾರೆ. ಒಂದು ವಿಚಾರವನ್ನು ನಾವು ಬಹಳ ಹೆಮ್ಮೆಯಿಂದ ಹೇಳಬೇಕಾಗುತ್ತದೆ. ನಮ್ಮ ಸರ್ಕಾರ ಇದ್ದಾಗ ನಾವು ಇಂಥ ಸ್ಕೀಂ ಮಾಡಿದ್ದೆವು. ನಾವು ಅಧಿಕಾರಕ್ಕೆ ಬಂದು ಈ ಸ್ಕೀಂ ತಂದಾಗ ಒಂದು ಸಾರಿ ಇಡೀ ಇಂಟರೆಸ್ಟ್ ಮನ್ನಾ ಮಾಡಿದ್ದೆವು. ಬಾಕಿ ಟೈಂನಲ್ಲಿ 7 ಪರ್ಸೆಂಟ್ ಕೊಡುತ್ತಾ ಹೋದೆವು. ನಾವು

ಅಧಿಕಾರದಲ್ಲಿದ್ದಾಗ ರೈತರಿಗೆ ಇದೇ ಸ್ಕೀಂನಲ್ಲಿ 173 ಕೋಟಿ ರೂಪಾಯಿ ರಿಯಾಯಿತಿ ಕೊಟ್ಟಿದ್ದೇವೆ. ಶ್ರೀ ರಾಮಕೃಷ್ಣ ಹೆಗಡೆಯವರು ಅಧಿಕಾರದಲ್ಲಿದ್ದಾಗ ಈ ಕೆಲಸ ಮಾಡಿದ್ದರು. ಹಾಗಾಗಿ ನೀವು 175 ಕೋಟಿ ರೂಪಾಯಿಗಳ ರಿಯಾಯಿತಿಯನ್ನು ರೈತರಿಗೆ ಕೊಟ್ಟರೆ ಏನೂ ಕಷ್ಟವಿಲ್ಲ. 175 ಕೋಟಿ ರೂಪಾಯಿ ಅಸಮ್‌ಷನ್ ಮಾಡಿದರೂ ಸಹ ಅಷ್ಟು ಬರ್ಡನ್ ಬರುವುದಿಲ್ಲ. ನಾವು ನೋಡಿದ್ದೇವೆ, ನಮ್ಮ ಅನುಭವ ಏನೆಂದರೆ ಎಷ್ಟು ಬೆನಿಫಿಟ್ ಕೊಟ್ಟರೂ 100 ಪರ್ಸೆಂಟ್ ರೈತರು ಬೆನಿಫಿಟ್ ತೆಗೆದುಕೊಂಡಿಲ್ಲ. ನಮ್ಮ ಇಚ್ಛೆ ಏನೆಂದರೆ ಎಲ್ಲರೂ ಬೆನಿಫಿಟ್ ತೆಗೆದುಕೊಳ್ಳಬೇಕೆಂದು ಇದೆ. We want that all the farmers should take the benefit. But unfortunately ನಾವು ಸ್ಕೀಂ ಎಕ್ಸ್‌ಟೆಂಡ್ ಮಾಡಿ ಸಹಾಯ ಮಾಡಿದರೂ 100 ಪರ್ಸೆಂಟ್ ಬೆನಿಫಿಟ್ ತೆಗೆದುಕೊಂಡಿಲ್ಲ. 175 ಕೋಟಿ ರೂಪಾಯಿ ಲೈಯಬಿಲಿಟಿ ಬಂದರೂ actual liability will be still less. ಹಾಗಾಗಿ ಎಲ್ಲಾ ದಿಸೆಯಲ್ಲಿ ವಿಚಾರ ಮಾಡಿದರೂ ರಾಜ್ಯದ ರೈತ ಕಷ್ಟದಲ್ಲಿದ್ದಾಗ ತಾವು ಈ ಸಮಯದಲ್ಲಿ ಅವನ ಬಗ್ಗೆ ಯಾವುದೇ ಚಿಂತನೆಯನ್ನು ಮಾಡಿಲ್ಲವೆಂದರೆ ವಿಚಾರ ಮಾಡಿಲ್ಲವೆಂದರೆ ಆ ಪಾಪದ ಭಾರ ನಿಮ್ಮ ಮೇಲೆ ಬರುತ್ತದೆ. ಒಳ್ಳೆಯ ನಿರ್ಣಯ ತೆಗೆದುಕೊಳ್ಳಿ, ಒಳ್ಳೆಯ ಕೆಲಸ ಮಾಡಿ. ನೀವೇ ಅಧಿಕಾರಕ್ಕೆ ಬನ್ನಿ, ನಮ್ಮ ತಕರಾರು ಇಲ್ಲ. ನಾಡಿನ ಜನರು ನಿಮಗೆ ಆಶೀರ್ವಾದ ಮಾಡಲಿ, ನಾವು ಇಲ್ಲೇ ಕುಳಿತಿರುತ್ತೇವೆ. ಆದರೆ ಮಾತ್ರ ಒಳ್ಳೆಯ ಕೆಲಸ ಮಾಡಿ. ರೈತರ ಬಗ್ಗೆ ಬಡವರ ಬಗ್ಗೆ, ಕಡುಬಡವರ ಬಗ್ಗೆ ಒಳ್ಳೆಯ ಕೆಲಸ ಮಾಡಿ. ಮಾಡಿದಿವೆಂದರೆ ನೀವು ಇಲ್ಲಿ ಬರುತ್ತೀರೆಂಬುದರಲ್ಲಿ ಸಂಶಯವಿಲ್ಲ.

ಆದರ ಬಗ್ಗೆ ಯಾವ ಸಂದೇಹ ಇಲ್ಲ. ಹಾಗಾಗಿ ಈ ನಿರ್ಣಯ ತೆಗೆದುಕೊಳ್ಳುವುದಕ್ಕೆ ಎಲ್ಲಾ ದೃಷ್ಟಿಯಿಂದ ವಿಚಾರ ಮಾಡಿ, ಯೋಚನೆ ಮಾಡಿ. ನಿಮ್ಮ ಬೊಕ್ಕಸದ ಮೇಲೆ ಪರಿಣಾಮ ಆಗುತ್ತದೆಯೇ, ಕಷ್ಟ ಆಗುತ್ತದೆಯೇ ? ಏನೂ ಆಗುವುದಿಲ್ಲ. ಮನಸ್ಸು ಇರಬೇಕು. ವಿಲ್ ಇರಬೇಕು, ಮನಸ್ಸು ಮಾಡಿದರೆ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ತಮ್ಮ ಮುಂಗಡ ಪತ್ರದಲ್ಲಿ ಏನು ಹೇಳಿದ್ದಾರೆ ? ಫರ್ಟಿಲೈಸರ್ಸ್ ಸಬ್ಸಿಡಿ ಕೊಡುತ್ತೇವೆಂದು ಹೇಳಿದರು. ಕೇಂದ್ರ ಸರ್ಕಾರ ಅದನ್ನು ಕೊಟ್ಟಿತು. You have kept for Production Subsidy Incentive. Not a single pie is there in your Budget for farmers next year ಅದು ಕೇಂದ್ರ ಸರ್ಕಾರದ ಹಣ. ಆ ಬಗ್ಗೆ ಹಣವನ್ನು ಈ ಬಡ್ಜೆಟ್‌ನಲ್ಲಿ ಇಟ್ಟಿಲ್ಲ. ಕೇಂದ್ರ ಸರ್ಕಾರ ಏನು ಫರ್ಟಿಲೈಸರ್ ಸಬ್ಸಿಡಿ ಕೊಟ್ಟಿದೆ ಅದನ್ನು ಮಾತ್ರ ಕೊಟ್ಟಿದ್ದೀರಿ. ಹೋದವರ್ಷ ಕೇಂದ್ರ ಸರ್ಕಾರದಿಂದ ಫರ್ಟಿಲೈಸರ್ ಸಬ್ಸಿಡಿ ಬಂತು. ಆದರೆ ಸ್ಮಾಲ್ ಮತ್ತು ಮೀಡಿಯಂ ಫಾರ್ಮರ್ಸ್ ಡಿಸ್ಟಿಂಕ್ಷನ್‌ನಲ್ಲಿ ಆ ಹಣ ರೈತರಿಗೆ ಸಿಕ್ಕಿಲ್ಲ. ಕೇವಲ ಸಬ್ಸಿಡಿ ಪೇಪರ್‌ನಲ್ಲಿ ಇದೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಲ್ಲಿ ಕವರ್ ಆದ ಜನ ಏನಿದ್ದಾರೆ ಅವರ ಬಗ್ಗೆ ಮಾನ್ಯ ಖಿರ್ಗೆ ಅವರು ಹೇಳಿದ ಹಾಗೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಲ್ಲಿ ಏನು ಸದಸ್ಯರಿದ್ದಾರೆ. ಅವರಲ್ಲಿ 15-16 ಪರ್ಸೆಂಟ್ ರೈತರಿಗೆ ಸಹಾಯ ಕೊಡುವುದಕ್ಕಾಗಿಲ್ಲ. Coverage is not more than 15-16% in Long Term Credit. ಈ ರೀತಿ ಪರಿಸ್ಥಿತಿ ಇದೆ. ಹೀಗಾಗಿ ಸರ್ಕಾರ ದೊಡ್ಡ ಮನಸ್ಸು ಮಾಡಿ, ರೈತರ ಹಿತದೃಷ್ಟಿಯಿಂದ, ರೈತರಿಗೆ ಏನು ಆಗಬೇಕು ಆ ಬಗ್ಗೆ ಗಮನಹರಿಸಿ ಕೃಷಿಯಲ್ಲಿ ಹೆಚ್ಚು ಆರೋಗ್ಯ ಆಗಬೇಕು, ಕೃಷಿಯಲ್ಲಿ ಉತ್ಪಾದನೆ ಹೆಚ್ಚು ಮಾಡಬೇಕು. ಆ ದೃಷ್ಟಿಯಿಂದ ಸಮಗ್ರವಾಗಿ ನಾವು ಏನು ಹೇಳಿದ್ದೇವೆ ಅದನ್ನು ಗಮನದಲ್ಲಿ ಇಟ್ಟುಕೊಂಡು ತಾವು ನಿರ್ಣಯ ಮಾಡಿ ರೈತರಿಗೆ ಅನುಕೂಲ ಕೊಡಬೇಕು. ರೈತರು ಬಹಳ ಕಷ್ಟಗಲ್ಲಿದ್ದಾರೆ. ಇವತ್ತು ಕೈಗಾರಿಕೆಗಳ ಅಭಿವೃದ್ಧಿಗೆ ಲೋನ್ ಕೊಡುತ್ತೀರಿ, ಸಬ್ಸಿಡಿ ಕೊಡುತ್ತೀರಿ. ಇಂಡಸ್ಟ್ರಿಕ್ ಆದರೆ ರೀಹ್ಯಾಬಿಲಿಟೇಟ್ ಮಾಡುತ್ತೀರಿ. ಹಾಗಿದ್ದರೆ ನಾನು ಕೇಳುತ್ತೇನೆ. ಕೃಷಿರಂಗ ಸಿಕ್ ಆಗಿದೆ, ಅದಕ್ಕೆ ಸಹಾಯ ಮಾಡುವುದಿಲ್ಲ ? ಆದ್ದರಿಂದ ನಾನು ಎಲ್ಲಾ

ದೃಷ್ಟಿಯಿಂದ ಒತ್ತಾಯಮಾಡುತ್ತಿದ್ದೇನೆ. ನಾವೆಲ್ಲರೂ ಏನು ರೂಲ್ 68ರ ಕೆಳಗೆ ಚರ್ಚೆ ಮಾಡಿ ತಮ್ಮ ಮುಂದೆ ವಿಷಯ ತಂದಿದ್ದೇವೆ ಅದರ ಲಾಭವನ್ನು ನೀವೇ ತೆಗೆದುಕೊಳ್ಳಿ.

ನಾವು ವಿಷಯ ತಂದು ಲಾಭ ನೀವು ತೆಗೆದುಕೊಳ್ಳಬೇಕು. ನಿಜವಾಗಿ ಇಂತಹ ಚರ್ಚೆಗಳು ನಿಮ್ಮ ಕಡೆಯಿಂದ ಬರಬೇಕಾಗಿತ್ತು. ನಾವು ತಂದು ನಿಮಗೆ ಲಾಭ ಮಾಡುತ್ತಿದ್ದೇವೆ. ನೀವು ಹೇಳಬಹುದು. We have trapped the Opposition ನೀವು ಲಾಭ ತೆಗೆದುಕೊಂಡು ರೈತರಿಗೆ ಸಹಾಯ ಮಾಡಿ. ನಿಮ್ಮ ಸರ್ಕಾರವೇ ಈ ಲಾಭ ತೆಗೆದುಕೊಳ್ಳಲಿ. ನಿಮ್ಮ ಮೇಲೆ ವಿಶ್ವಾಸ ಇದೆ. ರೈತರ ಬಗ್ಗೆ ನಾಳೆ ಹೇಳುತ್ತೇನೆಂದು ತಾವು ಹೇಳಿದಿರಿ. ನಿಮ್ಮ ಮನಸ್ಸಿನಲ್ಲಿ ರೈತರ ಬಗ್ಗೆ ಒಂದು ಚಿಂತನೆ ನಡೆಯುತ್ತಿದೆಯೆಂದು ನನಗೆ ವಿಶ್ವಾಸ ಇದೆ. ಹೀಗಾಗಿ ಗಂಭೀರವಾಗಿ ವಿಚಾರ ಮಾಡಿ. ನಮ್ಮನ್ನೂ ಕರೆಯಿಸಿ, ನಾವು ಚರ್ಚೆ ಮಾಡುವುದಕ್ಕೆ ಬರುತ್ತೇವೆ. ನಮ್ಮ ರೈತರಿಗೆ ಅನುಕೂಲ ಮಾಡಿಕೊಟ್ಟು ರೈತರ ಆಶೀರ್ವಾದಕ್ಕೆ ಪಾತ್ರರಾಗಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್:– ಪಿ.ಜಿ.ಆರ್. ಸಿಂಧ್ಯ ಅವರು ಮಾತನಾಡಲಿ.

SRI AZEEZ SAIT:– Mr. Chairman, I want to draw the attention of the Hon'ble Chief Minister to the Mysore City particularly to the North Constituency i.e. Mandi Mohalla, Lushker, and.....

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೇ, ಈ ವಿಷಯ ಇನ್ನೂ ಮುಕ್ತಾಯವಾಗಿಲ್ಲ. ಅವರು ಹೀಗೆ ಮಾತನಾಡಿದರೆ ವಿಷಯದ ಗಂಭೀರತೆ ಹೋಗುತ್ತದೆ. ಅವರು ಆಮೇಲೆ ಮಾತನಾಡಲಿ.

ಶ್ರೀ ಜಿ.ಬಿ. ಶಿವಕುಮಾರ್:– ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿ ಇರುವಾಗ ಮಾನ್ಯ ಸದಸ್ಯರು ಅವರ ಗಮನ ಸೆಳೆಯುವುದು ತಪ್ಪೇನಿದೆ ?

ಛೇರ್ಮನ್:– ಅಜೆಂಡಾ ಪ್ರಕಾರ ನಿಯಮ 68 ಚರ್ಚೆಯಾಗುತ್ತಿದೆ. ನೀವು ಕುಳಿತುಕೊಳ್ಳಿ.

ಶ್ರೀ ಅಜೀಜ್ ಸೇಟ್:– It is very urgent and important ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಮೈಸೂರು ನಗರದಲ್ಲಿ ಸುಮಾರು 3 ವರ್ಷದಿಂದ ... ತಾವು ಇವತ್ತು ಬೇಕಾದರೆ ಹೋಗಿ ನೋಡಿ. ಹೋಗಿ ಮೈಸೂರಿನಲ್ಲಿ ಇನ್ಸ್‌ಪೆಕ್ಟ್ ಮಾಡಿ ಬನ್ನಿ. ಅನೇಕ ಕನ್‌ಸರ್‌ವೆನ್ಸೀಸ್, ಡಬ್ರೀಸ್, ಅಂಡರ್‌ಗ್ರೌಂಡ್ ಡ್ರಯನೇಜ್ ಯಾವುದೂ ಕ್ಲೀನ್ ಇಲ್ಲ. ಮಂಡಿ ಮೊಹಲ್ಲಾದಲ್ಲಿ, ಲಸ್ಕರ್‌ನಲ್ಲಿ ಎಲ್ಲಾ ಕಡೆ .....

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:– ದಯಮಾಡಿ ತಾವು ಕೇಳಬೇಕು. ಸ್ವಲ್ಪ ಮಾರ್ಜಿನ್ ಕೊಡಬೇಕು ಅತ್ಯಂತ ಹಿರಿಯರು ಮಾತನಾಡುತ್ತಿದ್ದಾರೆ. 5 ನಿಮಿಷ ಅವಕಾಶಕೊಡಿ.

ಶ್ರೀ ಬೈರೇಗೌಡ:– ಯಾವಾಗ ಯಾರು ಬೇಕಾದರೂ ಮಾತನಾಡಬಹುದೇ ?

<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ</u>

ಮೈಸೂರಿನ ಮಂಡಿ ಮೊಹಲ್ಲಾ, ಲಸ್ಕರ್‌ನಲ್ಲಿ ಜನರಿಗೆ ವ್ಯಾಕ್ಸಿನ್ ಮತ್ತು ಪ್ರದೇಶವನ್ನು ಶುದ್ಧಗೊಳಿಸುವುದು

ಶ್ರೀ ಅಜೀಜ್ ಸೇಠ್:– ಮಾನ್ಯ ಅಧ್ಯಕ್ಷರೇ, ಮೈಸೂರು ಸಿಟಿಗೆ ವೈದ್ಯರುಗಳ ತಂಡವನ್ನು